# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

**ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ),**

**ಬೆವಿಕಂ, ನಿಗಮ ಕಛೇರಿ, ಕೆ.ಆರ್ ವೃತ್ತ,**

**ಬೆಂಗಳೂರು 560001**

## ಸಹಾಯಕ ಮಾರ್ಗದಾಳು–ಐ.ಟಿ.ಸಿ ಹುದ್ದೆಗಳ ನೇಮಕಾತಿಗೆ ಅಭ್ಯರ್ಥಿಗಳಿಗೆ ಸೂಚನೆಗಳು

1. ಅರ್ಜಿಯನ್ನು ಕಡ್ಡಾಯವಾಗಿ ಅಭ್ಯಥಿಗಳು ಬೆಸ್ಕಾಂ ವೆಬ್ ಸೈಟ್ http://www.bescom.org/ನ್ನು ಲಾಗ್ ಮಾಡುವುದರೊಂದಿಗೆ, ಅದರಲ್ಲಿ ಬಿತ್ತರಿಸಲಾಗಿರುವ ಅರ್ಜಿ ನಮೂನೆಯಲ್ಲಿಯೇ ಅವರ ವಿವರಗಳನ್ನು ಆನ್–ಲೈನ್(On-Line) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಇತರೇ ಯಾವುದೇ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

2. ಈ ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಮುನ್ನ, ಅಧಿಸೂಚನೆ ಹಾಗೂ ಇದರೊಂದಿಗೆ ನೀಡಲಾಗುವ ಸೂಚನೆಗಳನ್ನು ಓದಿಕೊಂಡು, ಜಾಗರೂಕತೆಯಿಂದ ಅರ್ಜಿಯನ್ನು ಭರ್ತಿ ಮಾಡಬೇಕು.

3. ಅಭ್ಯರ್ಥಿಗಳು On-Line ಮೂಲಕ ಅರ್ಜಿಗಳನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಭರ್ತಿ ಮಾಡತಕ್ಕದ್ದು; ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಭರ್ತಿ ಮಾಡತಕ್ಕದ್ದು.

4. ಒಬ್ಬ ಅಭ್ಯರ್ಥಿ ಒಂದೇ ಅರ್ಜಿ ಸಲ್ಲಿಸತಕ್ಕದ್ದು, ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆಯಿಲ್ಲದೇ ತಿರಸ್ಕರಿಸಲಾಗುವುದು.

5. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.

6. ಅಭ್ಯರ್ಥಿಗಳು ಯಾವುದೇ ತಪ್ಪು ಮಾಹಿತಿಯನ್ನು ನೀಡದೇ, ಅರ್ಜಿ ಭರ್ತಿ ಮಾಡಲು On-Line ನಲ್ಲಿ ನೀಡಿರುವ ಸೂಚನೆಗಳನ್ವಯ ಭರ್ತಿ ಮಾಡತಕ್ಕದ್ದು. ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು.

7. ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳುವುದು.,

   SC - Scheduled Caste,
   ST - Scheduled Tribe,
   GM - General Merit,
   Cat - Category I,
   IIA - Category 2A,
   IIB - Category 2B,
   IIIA - Category 3A,
   IIIB - Category 3B,
   Rural - Rural Reservation,
   KMC - Kannada Medium Candidate,
   PDP - Project Displaced Candidate.

8. ಪ್ರಕಟಿಸಿರುವ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ, ವಯೋಮಿತಿ, ಮೀಸಲಾತಿ ಇತ್ಯಾದಿ ವಿವರಗಳು ಉದ್ಯೋಗ ಪ್ರಕಟಣೆಯಲ್ಲಿ ಲಭ್ಯವಿರುತ್ತದೆ. ಸದರಿ ವಿವರಗಳಿಗಾಗಿ ಬೆಸ್ಕಾಂ ವೆಬ್ ಸೈಟ್ http://www.bescom.org/ಗೆ ಭೇಟಿ ನೀಡುವುದು.

**ಟಿಪ್ಪಣಿ:** ಪ್ರಕಟಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

9. ಶುಲ್ಕ ಪಾವತಿಸಬೇಕಾದ ವಿಧಾನ ಹಾಗೂ ಸ್ಥಳದ ವಿವರ:

   **i) <u>ಅರ್ಜಿ ಶುಲ್ಕ:</u>**

   1) ಸಾಮಾನ್ಯ ಅರ್ಹತೆ ಮತ್ತು ಪ್ರವರ್ಗI, IIA, IIB, IIIA ಮತ್ತು IIIB ಗೆ ಸೇರಿದ ಅಭ್ಯರ್ಥಿಗಳಿಗೆ - ರೂ. 400/–(ನಾಲ್ಕು ನೂರು ರೂಪಾಯಿಗಳು ಮಾತ್ರ)

   2) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ - ರೂ. 200/-(ಎರಡು ನೂರು ರೂಪಾಯಿಗಳು ಮಾತ್ರ)

**ii)** ಅರ್ಜಿ ಶುಲ್ಕವನ್ನು ಇ– ಅಂಚೆ ಕಛೇರಿ ಮೂಲಕ ಪಾವತಿಸುವುದು. ನಿಗದಿಪಡಿಸಿದ ಅರ್ಜಿ ಶುಲ್ಕವನ್ನು ಕೊನೆಯ ದಿನಾಂಕ:– **14/03/2015** ರೊಳಗಾಗಿ ಪಾವತಿಸತಕ್ಕದ್ದು. **ಇದನ್ನು ಹೊರತುಪಡಿಸಿ ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ.**

- **ದಿನಾಂಕ: 12/02/2015 ರಿಂದ ದಿನಾಂಕ: 14/03/2015 ರವರೆಗೆ ಇ– ಅಂಚೆ ಕಛೇರಿ ವ್ಯವಹಾರದ ವೇಳೆಯಲ್ಲಿ "ಆನ್‌ಲೈನ್" ನಲ್ಲಿ ಲಭ್ಯವಿರುವ 'ಇ–ಅಂಚೆ ಕಛೇರಿ ಚಲನ್' ಮೂಲಕ ಅರ್ಜಿ ಶುಲ್ಕವನ್ನು ಪಾವತಿಸಿದ ಅರ್ಹ ಅರ್ಜಿಗಳನ್ನು ಮಾತ್ರ ನೇಮಕಾತಿಗೆ ಪರಿಗಣಿಸಲಾಗುತ್ತದೆ.**
- **ಅರ್ಜಿ ಶುಲ್ಕವನ್ನು ದಿನಾಂಕ: 12/02/2015 ರಿಂದ ದಿನಾಂಕ: 14/03/2015 ರವರೆಗೆ ಇ– ಅಂಚೆ ಕಛೇರಿ ವ್ಯವಹಾರದ ವೇಳೆಯನ್ನು ಹೊರತು ಪಡಿಸಿ, ನಿಗದಿತ ಅವಧಿಯ ಮುಂಚೆ ಅಥವಾ ನಂತರ ಪಾವತಿಸಿದ ಅರ್ಜಿ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೇ ಯಾವುದೇ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ ಮತ್ತು ಅಂತಹ ಅರ್ಜಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.**

**10. ಅಭ್ಯರ್ಥಿಗಳು On-Line ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಸೂಚನೆಗಳನ್ನು ಕಡ್ಡಾಯವಾಗಿ ಓದಿ ತಿಳಿದುಕೊಳ್ಳತಕ್ಕದ್ದು.**

### ಹಂತ –1

**A)** ವೆಬ್‌ಸೈಟ್ http://www.bescom.org/ ನ **Latest News** ನಲ್ಲಿ "**ONLINE APPLICATION FOR POST OF ASSISTANT LINEMAN IN BESCOM-2015**" ಮೇಲೆ ಕ್ಲಿಕ್ ಮಾಡಿದ ನಂತರ '**Submit Application**' ಮೇಲೆ ಕ್ಲಿಕ್ ಮಾಡಿ ಪರದೆ ಮೇಲೆ ಮೂಡುವ ಎಲ್ಲಾ ವಿವರಗಳನ್ನು ಭರ್ತಿ ಮಾಡಿ '**Preview' button**' ಮೇಲೆ ಕ್ಲಿಕ್ ಮಾಡಿದ ನಂತರ **Preview Page** ಮೂಡುತ್ತದೆ.

**B)** ತಿದ್ದುಪಡಿ ಇದ್ದಲ್ಲಿ '**Edit' button** ಮೇಲೆ ಕ್ಲಿಕ್ ಮಾಡಬೇಕು.'**Edit' button** ಉಪಯೋಗಿಸಿ, ಈ ಹಿಂದೆ ಭರ್ತಿ ಮಾಡಿದ ವಿವರಗಳಲ್ಲಿ ತಪ್ಪಿದ್ದಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಿ ಎಲ್ಲಾ ವಿವರಗಳು ಸರಿಯಾಗಿರುವ ಕುರಿತು ಖಾತರಿ ಪಡಿಸಿಕೊಂಡ ನಂತರ'**Submit' button** ಕ್ಲಿಕ್ ಮಾಡುವುದು.

**C)** ನಂತರ ಅಭ್ಯರ್ಥಿಯ '**Application ID**' ಮತ್ತು '**Verification Code**' ಸಂಖ್ಯೆಗಳನ್ನು ನೀಡಲಾಗುತ್ತದೆ. ಸದರಿ ಸಂಖ್ಯೆಗಳನ್ನು ತಪ್ಪದೇ ಬರೆದಿಟ್ಟುಕೊಂಡು 'Home **button**' ಕ್ಲಿಕ್ ಮಾಡುವುದು.

### ಹಂತ–2

**D)** ನಂತರ "UPLOAD ITC CERTIFICATE" **button** ಮೇಲೆ ಕ್ಲಿಕ್ ಮಾಡಿ, '**Application ID**' ಭರ್ತಿ ಮಾಡಿ "Browse" **button** ಮೇಲೆ ಕ್ಲಿಕ್ ಮಾಡಿ ITC CERTIFICATE ಅನ್ನು 'upload' ಮಾಡುವುದು.

### ಹಂತ–3

**E)** ನಂತರ 'Generate Postal Challan' **button** ಕ್ಲಿಕ್ ಮಾಡುವುದು.

**F)** ನಂತರ Application ID and Date Of Birth ಯನ್ನು ಭರ್ತಿ ಮಾಡಿ Submit button ಆಯ್ಕೆ ಮಾಡುವುದು.

**G)** ನಂತರ ಇ–ಅಂಚೆ ಕಛೇರಿ ಚಲನನ್ನು ಡೌನ್‌ಲೋಡ್ ಮಾಡಿಕೊಂಡು ಇ–ಅಂಚೆ ಕಛೇರಿಯಲ್ಲಿ ಅರ್ಜಿ ಶುಲ್ಕವನ್ನು ಪಾವತಿಸುವುದು.

### ಹಂತ– 4

**H)** ನಂತರ 'Print Application' **button** ಮೇಲೆ ಕ್ಲಿಕ್ ಮಾಡುವುದು. ನಂತರ '**Application ID**' ಯನ್ನು ನಮೂದಿಸಿ '**Submit' button** ಮೇಲೆ ಕ್ಲಿಕ್ ಮಾಡಿ ಅರ್ಜಿಯ ಮುದ್ರಣ ಪ್ರತಿ ಪಡೆಯುವುದು.

**ಅಭ್ಯರ್ಥಿಗಳುON LINEಮೂಲಕ ಅರ್ಜಿಯನ್ನು ಭರ್ತಿ ಮಾಡುವಾಗ,**
**ಈ ಕೆಳಗಿರುವ ಅಂಶಗಳನ್ನು ತಪ್ಪದೇ ಗಮನಿಸುವುದು:**

| ಅಂಕಣ | ಭರ್ತಿ ಮಾಡಬೇಕಾದ ಮಾಹಿತಿ | | ಷರಾ ( ಭರ್ತಿ ಮಾಡುವ ವಿವರ) |
|---|---|---|---|
| 1 | Applicant's Full Name | ಅಭ್ಯರ್ಥಿಯ ಪೂರ್ಣ ಹೆಸರು | ಎಸ್.ಎಸ್.ಎಲ್.ಸಿ/ ಹತ್ತನೇ ತರಗತಿಯ ಅಂಕಪಟ್ಟಿಯಲ್ಲಿ ನಮೂದಿಸಿರುವಂತೆ. |
| 2 | Gender | ಲಿಂಗ | ಗಂಡು/ಹೆಣ್ಣು |
| 3 | Mother's Name | ತಾಯಿಯ ಹೆಸರು | ಎಸ್.ಎಸ್.ಎಲ್.ಸಿ/ ಹತ್ತನೇ ತರಗತಿಯ ಅಂಕಪಟ್ಟಿಯಲ್ಲಿ ನಮೂದಿಸಿರುವಂತೆ. |
| 4 | Father's Name | ತಂದೆಯ ಹೆಸರು | ಎಸ್.ಎಸ್.ಎಲ್.ಸಿ/ ಹತ್ತನೇ ತರಗತಿಯ ಅಂಕಪಟ್ಟಿಯಲ್ಲಿ ನಮೂದಿಸಿರುವಂತೆ. |
| 5 | Date of Birth | ಜನ್ಮ ದಿನಾಂಕ | ಎಸ್.ಎಸ್.ಎಲ್.ಸಿ/ ಹತ್ತನೇ ತರಗತಿಯ ಅಂಕಪಟ್ಟಿಯಲ್ಲಿ ನಮೂದಿಸಿರುವಂತೆ. |
| 6 | Applied Category | ಕೋರಿರು ವವರ್ಗ | ಸಾಮಾನ್ಯ ಅರ್ಹತೆ/ ಪ್ರವರ್ಗ I/ IIA/ IIB/ IIIA/ IIIB/ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿ ಸಂಬಂಧಿಸಿದ ಪ್ರವರ್ಗವನ್ನು ಆಯ್ಕೆ ಮಾಡಿಕೊಳ್ಳುವುದು. |
| 7 | Do you come under these groups? | ನೀವು ಈ ಗುಂಪುಗಳಲ್ಲಿ ಬರುವಿರಾ? | ಸಂಬಂದಿಸಿದ ಒಳ ಮಿಸಲಾತಿಯನ್ನು ಆಯ್ಕೆ ಮಾಡಿಕೊಳ್ಳುವುದು. |
| 8 | Were/ Are you a State Government Servant? | ಸರ್ಕಾರಿ ಸೇವೆಯಲ್ಲಿ ಈ ಹಿಂದೆ/ ಈಗ ಇರುವಿರಾ | ಸರ್ಕಾರಿ ಸೇವೆ ಯಲ್ಲಿ ಇದ್ದಲ್ಲಿ/ ಇಲ್ಲದಿದ್ದಲ್ಲಿ – ಹೌದು/ ಇಲ್ಲ. |
| 9 | Do you claim age Relaxation? If yes, select accordingly. | ನೀವು ವಯೋಮಿತಿ ರಿಯಾಯಿತಿ ಕೋರುವಿರಾ? | ಸಂಬಂದಿಸಿದ ರಿಯಾಯಿತಿಯನ್ನು ಆಯ್ಕೆ ಮಾಡಿಕೊಂಡು, ಅರ್ಹ ಸೇವಾ ಅವಧಿಯನ್ನು ನಮೂದಿಸುವುದು..( ಇದ್ದಲ್ಲಿ) |
| 10 | Address for communication | ಪೂರ್ಣ ವಿಳಾಸ | ಪೂರ್ಣ ವಿಳಾಸವನ್ನು ಸರಿಯಾಗಿ ಭರ್ತಿ ಮಾಡುವುದು |
| 11 | Please Upload the recent photograph with signature. | ಭಾವಚಿತ್ರ ಸಹಿಯೊಂದಿಗೆ | ಭಾವಚಿತ್ರವನ್ನು ಸಹಿಯೊಂದಿಗೆ 'ಅಪ್ಲೋಡ' ಮಾಡುವುದು |
| 12 | Email Address | ಇ-ಮೇಲ್ | ಇ–ಮೇಲ್ವಿಳಾಸ ಭರ್ತಿ ಮಾಡುವುದು |
| 13 | Mobile No. | ಮೊಬೈಲ್ ನಂ. | ಮೊಬೈಲ್ ನಂ. ಭರ್ತಿ ಮಾಡುವುದು |
| 14 | Total marks Obtained in qualifying Examination | ಗಳಿಸಿದಅಂಕ | ಗಳಿಸಿದ ಅಂಕಗಳನ್ನು ಭರ್ತಿ ಮಾಡುವುದು[ಅಂಕ ಪಟ್ಟಿಯಲ್ಲಿ ಇರುವಂತೆ] |
| | Maximum Marks in qualifying Examination | ಗರಿಷ್ಠ ಅಂಕ | ಗರಿಷ್ಠ ಅಂಕಗಳನ್ನು ಭರ್ತಿಮಾಡುವುದು[ಅಂಕ ಪಟ್ಟಿಯಲ್ಲಿ ಇರುವಂತೆ] |
| 15 | Do You have knowledge of Kannada in reading and writing | ಕನ್ನಡದಲ್ಲಿ ಓದುವ ಮತ್ತು ಬರೆಯುವ ಜ್ಞಾನ | ಹೌದು/ ಇಲ್ಲ (ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು). |

*ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 12/02/2015.

* ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 13/03/2015.

* ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ: 14/03/2015.

**ಇತರೆ ಷರತ್ತುಗಳು:**

1. ಭಾರತೀಯ ನಾಗರೀಕನಾಗಿರತಕ್ಕದ್ದು.
2. ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಅಭ್ಯರ್ಥಿಯು ನೇಮಕಾತಿಗೆ ಅರ್ಹರಾಗುವುದಿಲ್ಲ.
3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.
4. ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಕಾದಿರಿಸಿಕೊಂಡಿದೆ.
5. ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಅಧಿಸೂಚನೆಯಲ್ಲಿ ತಿಳಿಸಿರುವ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ಮಾತ್ರ ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.
6. ಶೈಕ್ಷಣಿಕ ವಿದ್ಯಾರ್ಹತೆ: ಅಧಿಸೂಚಿಸಿದ ಹುದ್ದೆಯ ಮುಂದೆ ಸೂಚಿಸಿರುವ ವಿದ್ಯಾರ್ಹತೆಯನ್ನು ದಿನಾಂಕ 13.03.2015ಕ್ಕೆ ಮೊದಲು ಅಭ್ಯರ್ಥಿಗಳು ಹೊಂದಿರಬೇಕು. ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಅರ್ಜಿಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.
7. ಪ್ರಮಾಣ ಪತ್ರದಲ್ಲಿ ನಮೂದಿಸಿರುವ 'ಪಡೆದ ಅಂಕ'ಗಳನ್ನು ಮತ್ತು 'ಗರಿಷ್ಠ ಅಂಕ'ಗಳನ್ನು ತಪ್ಪದೇ ನಮೂದಿಸಬೇಕು.
8. ಅಂಕಗಳು ವ್ಯತ್ಯಾಸ ಕಂಡುಬಂದಲ್ಲಿ ಅಭ್ಯರ್ಥಿಯೇ ಜವಾಬ್ದಾರರಾಗಿರುತ್ತಾರೆ.
9. **ವಯೋಮಿತಿ:** ಅಧಿಸೂಚನೆಯಲ್ಲಿ ಹುದ್ದೆಯ ಮುಂದೆ ಸೂಚಿಸಿದಂತೆ, ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಕನಿಷ್ಠ ವಯೋಮಿತಿಯನ್ನು ಹೊಂದಿರಬೇಕು ಹಾಗೂ ನಿಗದಿತ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು. ಈ ಕೆಳಗಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಕೆಳಗೆ ತಿಳಿಸಿರುವ ಮಟ್ಟಿಗೆ ಹೆಚ್ಚಿಸಲಾಗುವುದು.

a) ಕವಿಮಂ/ ಕವಿಪ್ರನಿನಿ ತರಬೇತಿ ಕೇಂದ್ರದಿಂದ "ಮಾರ್ಗಕರ್ಮಿ" ವೃತ್ತಿಯಲ್ಲಿ ಮೂರು ವರ್ಷಗಳ ಅವಧಿಯ ತರಬೇತಿ ಹೊಂದಿರುವ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ತರಬೇತಿ ಹೊಂದಿರುವ ಅವಧಿಯಷ್ಟು(ಗರಿಷ್ಠ 3 ವರ್ಷಗಳವರೆಗೆ) ವಿನಾಯಿತಿಯನ್ನು ನೀಡಲಾಗುವುದು.

b) ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಕೇಂದ್ರ ಸಶಸ್ತ್ರ ದಳದಲ್ಲಿ ಸೇವೆ ಸಲ್ಲಿಸಿರುವನೋ ಅಷ್ಟು ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಗರಿಷ್ಠ 45 ವರ್ಷಗಳವರೆಗೆ ವಯೋಮಿತಿಯಲ್ಲಿ ಸಡಿಲಿಕೆಯನ್ನು ನೀಡಲಾಗುವುದು.

c) ಕವಿಪ್ರನಿನಿ/ ಎಸ್ಕಾಂ ನಿಗಮ/ ಕಂಪನಿಗಳಲ್ಲಿ ಈಗಾಗಲೇ ಖಾಯಂ ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದರೆ, ಅಂತಹ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ, ಅವರು ಕವಿಪ್ರನಿನಿ/ ಎಸ್ಕಾಂ ನಿಗಮ/ ಕಂಪನಿಗಳಲ್ಲಿ ಸೇವೆ ಸಲ್ಲಿಸಿರುವ ಅವಧಿಯಷ್ಟು, ಗರಿಷ್ಠ ಏಳು ವರ್ಷಗಳ ಮಿತಿಗೊಳಪಟ್ಟು ಸಡಿಲಿಕೆಯನ್ನು ನೀಡಲಾಗುವುದು.

d) ಕವಿಪ್ರನಿನಿ/ ಎಸ್ಕಾಂ ನಿಗಮ/ ಕಂಪನಿಗಳಲ್ಲಿ, ಗ್ಯಾಂಗಮನ್/ ಬಿಲ್ ಬಾಯ್ಸ್/ ಪ್ರೊಬೇಷನರಿ ಮಜ್ದೂರ್/ ತಾತ್ಕಾಲಿಕ ಶುಚಿಗಾರರು/ ಸ್ಯಾನಿಟರಿ ವರ್ಕರ್ ಮತ್ತು ತಾತ್ಕಾಲಿಕ ಮಾಪಕ ಓದುಗರಾಗಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಿರುವ/ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದರೆ, ಅಂತಹ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಅವರು ಕವಿಪ್ರನಿನಿ/ ಎಸ್ಕಾಂ ನಿಗಮ/ ಕಂಪನಿಗಳಲ್ಲಿ ಸೇವೆ ಸಲ್ಲಿಸಿರುವ ಅವಧಿಯಷ್ಟು, ಗರಿಷ್ಠ 10 ವರ್ಷಗಳ ಮಿತಿಗೊಳಪಟ್ಟು ಸಡಿಲಿಕೆಯನ್ನು ನೀಡುವುದು. ಸದರಿ ವಯೋಮಿತಿಯ ರಿಯಾಯಿತಿಯನ್ನು ಪಡೆಯಲು ಸಂಬಂಧಿಸಿದ ಕವಿಪ್ರನಿನಿ/ ಎಸ್ಕಾಂ ಕಛೇರಿಯಿಂದ ಪ್ರಮಾಣ ಪತ್ರವನ್ನು ಪಡೆಯುವುದು.

10. **ಜಾತಿ / ಮೀಸಲಾತಿ ಪ್ರಮಾಣ ಪತ್ರಗಳು:** ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ನಮೂನೆಗಳಲ್ಲಿಯೇ ಮೀಸಲಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಅಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, 2ಬಿ, 3ಎ, 3ಬಿ ವರ್ಗದ ಮೀಸಲಾತಿ ಪ್ರಮಾಣ ಪತ್ರಗಳನ್ನು ಪಡೆದ ದಿನಾಂಕದಿಂದ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೆ ಐದು ವರ್ಷಗಳ ಅವಧಿಯಲ್ಲಿರಬೇಕು. 'ಸಹನ ಶಕ್ತಿ ಪರೀಕ್ಷೆ'ಗೆ ಅರ್ಹರಾದಾಗ, 'ಸಹನ ಶಕ್ತಿ ಪರೀಕ್ಷೆ' ಸಮಯದಲ್ಲಿ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ 'ದೃಢೀಕೃತ ನಕಲು ಪ್ರತಿ'ಯೊಂದಿಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ಅರ್ಹರಾದಲ್ಲಿ ಮಾತ್ರ ಸಾಮಾನ್ಯ ಅರ್ಹತೆಯಡಿಯಲ್ಲಿ ಪರಿಗಣಿಸಲಾಗುವುದು. ಈ ನಮೂನೆಗಳನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಸಲ್ಲಿಸಲ್ಪಡುವ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು. ಮೀಸಲಾತಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದು ಹಾಗೂ ಅದೇ ಪ್ರಮಾಣ ಪತ್ರವನ್ನು ಸಂದರ್ಶನ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

| | | |
|---|---|---|
| ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು | : | ನಮೂನೆ ' ಡಿ ' |
| ಆ) ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳು | : | ನಮೂನೆ ' ಇ ' |
| ಇ) ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು | : | ನಮೂನೆ ' ಎಫ್ ' |

11. **ಗ್ರಾಮೀಣ ಅಭ್ಯರ್ಥಿ:** ಕಾಲಕಾಲಕ್ಕೆ ಕರ್ನಾಟಕ ಸರ್ಕಾರ ಆದೇಶದನ್ವಯ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮ್ ಮಾಡುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ನಮೂನೆ–2ನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರವಲ್ಲದೇ ಮೇಲುಸ್ಥರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ–1ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಿತ ತಹಶೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, 2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ–2ರಲ್ಲಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಪಡೆದಿಟ್ಟುಕೊಂಡಿರತಕ್ಕದ್ದು. 'ಸಹನ ಶಕ್ತಿ ಪರೀಕ್ಷೆ'ಗೆ ಅರ್ಹರಾದಾಗ 'ಸಹನ ಶಕ್ತಿ ಪರೀಕ್ಷೆ' ಸಮಯದಲ್ಲಿ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ 'ದೃಢೀಕೃತ ನಕಲು ಪ್ರತಿ'ಯೊಂದಿಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು.(ಇತರೆ ನಮೂನೆಗಳಲ್ಲಿ ಸಲ್ಲಿಸಲ್ಪಡುವ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಹವರು ಗ್ರಾಮೀಣ ಮೀಸಲಾತಿಗೆ ಸಹ ಅನರ್ಹರಾಗುತ್ತಾರೆ.

12. **ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ:** ಕಾಲಕಾಲಕ್ಕೆ ಕರ್ನಾಟಕ ಸರ್ಕಾರ ಆದೇಶದನ್ವಯ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು. 'ಸಹನ ಶಕ್ತಿ ಪರೀಕ್ಷೆ'ಗೆ ಅರ್ಹರಾದಾಗ 'ಸಹನ ಶಕ್ತಿ ಪರೀಕ್ಷೆ' ಸಮಯದಲ್ಲಿ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ 'ದೃಢೀಕೃತ ನಕಲು ಪ್ರತಿ'ಯೊಂದಿಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

13. **ದುರ್ನಡತೆ:** ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ಸಹನ ಶಕ್ತಿ ಪರೀಕ್ಷೆಯಲ್ಲಿ/ ಮೂಲ ದಾಖಲಾತಿ ಪರಿಶೀಲನೆ ಸಮಯದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು ಸ್ವತ: ಕ್ರಿಮಿನಲ್ ಮೊಕದ್ದಮೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಹುದ್ದೆಯ ಆಯ್ಕೆ/ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

14. **ಕಂಪನಿಯೊಂದಿಗೆ ಪತ್ರ ವ್ಯವಹಾರ:** ಅಭ್ಯರ್ಥಿಯು ಕಂಪನಿಯೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸಲು ಅವಕಾಶವಿರುವುದಿಲ್ಲ.

15. ವಿಳಾಸ ಬದಲಾವಣೆಗೆ ಅಭ್ಯರ್ಥಿಗಳಿಗೆ ಆಸ್ಪದ ಇರುವುದಿಲ್ಲ. ಆದಾಗ್ಯೂ ಈ ವಿಚಾರದಲ್ಲಿ ಕಂಪನಿಯು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಈ ಕುರಿತು ಅಭ್ಯರ್ಥಿಗಳು ಎಚ್ಚರ ವಹಿಸತಕ್ಕದ್ದು.

16. ಇತರೆ ನಮೂನೆಗಳಲ್ಲಿ ಅಥವಾ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ಯಾವುದೇ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ಅಂತಹ ಅರ್ಜಿದಾರರ ಮೀಸಲಾತಿಯನ್ನು/ಅಭ್ಯರ್ಥಿತ್ವವನ್ನು ಅನರ್ಹಗೊಳಿಸಲಾಗುವುದು.

1) ಹುದ್ದೆಗೆ ನಿಗದಿಪಡಿಸಿದ ಶುಲ್ಕ(ಅರ್ಜಿಯನ್ನು ಭರ್ತಿ ಮಾಡಿದ ನಂತರ ಪಾವತಿಸತಕ್ಕದ್ದು) ಪಾವತಿ ರಸೀತಿ.
2) ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಅಂಕಪಟ್ಟಿಗಳು.
3) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ ವರ್ಗಾವಣೆ ಪ್ರಮಾಣ ಪತ್ರ/ ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ.
4) ನಿರಾಪೇಕ್ಷಣಾ ಪತ್ರ(No Objection Certificate)(ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳಿಗೆ)
5) ಸೈನಿಕ ಸೇವೆಯಿಂದ ಬಿಡುಗಡೆಯಾದ/ ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ(ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ)
6) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ, ಮತ್ತು ಪ್ರವರ್ಗ–3ಬಿ ಮೀಸಲಾತಿ ಪ್ರಮಾಣ ಪತ್ರಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ(ಮೀಸಲಾತಿ ಕೋರಿದ್ದಲ್ಲಿ).
7) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2ರಲ್ಲಿ(ಮೀಸಲಾತಿ ಕೋರಿದ್ದಲ್ಲಿ).
8) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ).
9) ಅಭ್ಯರ್ಥಿಯು ದೈಹಿಕ ಸಾಮರ್ಥ್ಯದ ಬಗ್ಗೆ ಸಹನ ಶಕ್ತಿ ಪರೀಕ್ಷೆಯ ಸಮಯದಲ್ಲಿ ಸಕ್ಷಮ ವೈದ್ಯಕೀಯ ಪ್ರಾಧಿಕಾರಿಗಳಿಂದ ಅಭ್ಯರ್ಥಿಗಳು ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸತಕ್ಕದ್ದು.

**ವಿಶೇಷ ಸೂಚನೆಗಳು:**

1. ON-LINE ಮೂಲಕ ಅರ್ಜಿ ಸಲ್ಲಿಸುವಾಗ ಎಲ್ಲಾ ಮಾಹಿತಿಗಳನ್ನು ಸರಿಯಾಗಿ ಭರ್ತಿ ಮಾಡಿರುವ ಕುರಿತು ಖಚಿತಪಡಿಸಿಕೊಂಡು ನಂತರ ಅದರ ಒಂದು ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಭದ್ರವಾಗಿ ತೆಗೆದಿಟ್ಟುಕೊಂಡಿರತಕ್ಕದ್ದು.
2. ಈಗಾಗಲೇ ಸೇವೆಯಲ್ಲಿರುವ/ ಸೇವೆ ಸಲ್ಲಿಸಿದ ಅಭ್ಯರ್ಥಿಗಳು ಅವರುಗಳ ನೇಮಕಾತಿ ಪ್ರಾಧಿಕಾರಿಗಳಿಂದ, ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಅನುಮತಿಯನ್ನು ಪಡೆದಿಟ್ಟುಕೊಂಡಿರತಕ್ಕದ್ದು.
3. ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕವಾಗುವುದು.

**ಅರ್ಜಿ ಸಂಬಂಧಿತ ವಿಚಾರಣೆಗೆ-**
**ಬೆಳಗ್ಗೆ 10 ರಿಂದ ಸಂಜೆ 5.30 ರವರೆಗೆ ದೂರವಾಣಿ ಸಂಖ್ಯೆ:- 080-22085061 ಸಂಪರ್ಕಿಸುವುದು**

**ಅರ್ಜಿ ಶುಲ್ಕ ಪಾವತಿ ವಿಚಾರಣೆಗಾಗಿ-**

**ಅಭ್ಯರ್ಥಿಗಳು ಅರ್ಜಿ ಶುಲ್ಕ ಪಾವತಿಸಿರುವ ಬಗ್ಗೆ www.karnatakapost.gov.inನಲ್ಲಿ ಅರ್ಜಿಶುಲ್ಕ ಪಾವತಿಸಿದ 48 ಗಂಟೆಗಳ ನಂತರ ದೃಢಪಡಿಸಿಕೊಳ್ಳಬಹುದಾಗಿದೆ. ಪಾವತಿ ಸಂದರ್ಭದಲ್ಲಿ ಯಾವುದೇ ಸ್ಪಷ್ಟೀಕರಣಕ್ಕಾಗಿ ಅಭ್ಯರ್ಥಿಗಳು ಸಹಾಯವಾಣಿ ದೂರವಾಣಿ ಸಂಖ್ಯೆ:-080-22392668ಅಥವಾ ಇ-ಮೇಲ್ ವಿಳಾಸ:- apmgbdco@gmail.comಸಂಪರ್ಕಿಸುವುದು.**

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ),
ಬೆವಿಕಂ, ನಿಗಮ ಕಛೇರಿ, ಕೆ.ಆರ್ ವೃತ್ತ,
ಬೆಂಗಳೂರು **560001**